ಫಾರೆಸ್ಟ್ ಇಲಾಖೆ.

ತಾರೀಖು 29ನೇ ಮೇ ಸ್ ೧೮೮೯ನೇ ಇಸವಿ.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬಾಬತು ಬೀಬೀನೆಗಳು ಕೆಳಗೆ ಕಾಣಿಸಿರುವ ತಾರೀಖು ವ ಸ್ಥಳಗಳಲ್ಲಿ ಪಬ್ಲಿಕ್ ಹರಾಜ್ ಮೂಲ್ಕ ವಿಕ್ರಯಸಲ್ಪಡುವದು.

ನಂಬರ್.	ಡಿಪೋ ಹೆಸರು.	ಜಾತಿವಾರ್ ತಪಸೀಲ್.	ಆದದು.	ಹರಾಜ್ ತಾರೀಖು.	ಷರಾ.
1	ಕಣಬೂರು ..	ಸಾಗವಾನೀ ತುಂಡುಗಳು	50		
		ಜಂಗಲ್ ತುಂಡುಗಳು	400	1ನೇ ಜುಲೈ 1889	
2	ಶಿವಮೊಗ್ಗಾ ..	ಸಾಗವಾನೀ ನಾಟಾಗಳು	60		
		ಜಂಗಲ್‌ನಾಟಾ ಮತ್ತು ತುಂಡುಗಳು	150	5ನೇ ಡಿಟೋ	
		ಸಾಗವಾನೀ ಪಲಗುಗಳು	200		
3	ಆಯನೂರು ..	ಜಂಗಲ್ ನಾಟಾಗಳು	250	9ನೇ ಡಿಟೋ	

ಹರಾಜ್ ಷರತ್ತುಗಳು—1887ನೇ ಇಸವಿ ಸೆಪ್ಟಂಬರು 3ನೇ ನಂಬ್ರದಂ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಏ. ಕೃಷ್ಣಸ್ವಾಮಯ್ಯಂಗಾರ್,
ಫಾರ್, ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

1882ನೇ ಇಸವಿ 14ನೇ ನಂಬರ್ ಆಕ್ಟ್ ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಪ್ರಕರಣದ ಮೇರಿಗೆ.

ಬೆಂಗಳೂರು ಸಬ್ ಜಡ್ಜ್ ಕೋರ್ಟಿನಲ್ಲಿ.

ಸ್ ೧೮೮೯ನೇ ಇಸವಿ ಸಿವಿಲ್ ಸೂಟ್ ನಂಬರ್ 1005.

ವಾದಿಗಳು.	ಪ್ರತಿವಾದಿಗಳು.
1. ತುಮಕೂರಲ್ಲಿರುವ ಮಹಮ್ಮದ್‌ಮಸ್ತಾನಾಬಿ ಮುತ್ತುವಲ್ಲಿ	1. ಬುರ್ಹಾನಾಬಿ.
2. ಮಹಮ್ಮದ್ ಅಕ್ಕಬರ್‌ಸಾಬ್	2. ಸೈದಾವೂದ್ ಸಾಬ್
3. ಅಬ್ದುಲ್‌ಕರೀಂಸಾಬ್	3. ಖಸಾಯಿಬುರ್ಹಾನ್‌ಸಾಬ್
4. ಮಹಮ್ಮದ್ ಅಲ್ಲಿಸಾಬ್	4. ಹಯಾತ್‌ಮಿಯ್ಯ
	5. ಜಯವಿಲ್ಲಾಖಾ ವಾಸ ತುಮಕೂರ

ಇದರಿಂದ ತುಮಕೂರು ಕಸಬು ಸ್ಥಳದ ಗಿಮುಸಲ್‌ಮರ್ಜಿಜನಗಳಿಗೆ ತಿಳಿಯಪಡಿಸುವದೇನಂದರೆ, ಮೇಲ್‌ಕಂಡ ವಾದಿಗಳು ಪ್ರತಿವಾದಿಗಳ ಮೇಲೆ ಕಸಬು ತುಮಕೂರ ಹೊರಪೇಟೆಲಿರುವ ಮಸ್‌ಜಿದ್ ಮ್ಯಾನೇಜ್‌ಮೆಂಟ್ ಬಗ್ಗೂ ವೇಷ್‌ಯಿಮೊಮ್ ಕೆಲಸದ ಮೊಕರೂರಾತಿವಿಷಯವಾಗಿಯೂ ಈ ಕೋರ್ಟಿನಲ್ಲಿ ತಂದು ಯಿರುವ ದಾವಾ ಈ ಕೋರ್ಟಿನಲ್ಲಿ 1889ನೇ ಇಸವಿ ಆಗಸ್ಟು 12ನೇ ತಾರೀಖು ದಿವಿ 11 ಘಂಟೆಗೆ ವಿಚಾರಣೆ ಬಗ್ಯೆ ಮೊಕರೂರಾಗಿರುವದ್ದರಿಂದ ಈ ಕೆಸಿನಿಗೆ ವಾದಿಯಾಗಿ ಯಾಗಲಿ ಪ್ರತಿವಾದಿಯಾಗಿಯಾಗಲಿ ಕೀರತಕ್ಕ ಜನಗಳು ಈ ಕೋರ್ಟಿನ ರೂಬರೂ ಆ ವೇಳಿಗೆ ಹಾಜರಾಗತಕ್ಕದ್ದಿಧೆ.

ಏತಾರೀಖು 14ನೇ ಮಾಹೆ ಜೂ ೧೮೮೯ನೇ ಇಸವಿ.

ಯಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫಿಸಿನಿಂದ.

ತಾರೀಖು 14ನೇ ಜೂ ೧೮೮೯.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈಚಿಗೆ ಈ ಡಿಸ್ಟ್ರಿಕ್ಟಿನಲ್ಲಿ ವಿಧವಿಧವಾದ ಹೆಸರುಗಳಿಂದ ಅನೇಕ ಕಂಪೆನಿಗಳು ಏರ್ಪಟ್ಟಿರುವದಲ್ಲದೆ ದಿನವಹಿ ಹೊಸಕಂಪನಿಗಳು ಜೇರ್ಪಡುತ್ತಲಿವೆ, ಈ ಕಂಪನಿಯವರು ಷೇರ್ ಹೊಲ್ಡರ್‌ಗಳಿಗೆ ನಾನಾಬೋಧನೆಗಳಿಂದ ಹೆಚ್ಚಾದ ಸಹಾಯವನ್ನು ಕೊಡುವದಾಗಿ ಆಕಿಯನ್ನು ಪುಂಟುಮಾಡಿ ತದ್ವಾರ ಭಾರಿಯಾಗಿ ದ್ರವ್ಯ ಸಂಪಾದನೆ ಮಾಡುತ್ತಿರುವದಾಗಿ ತಿಳಿಯಬರುತ್ತೆ.

ಈ ಕಂಪೆನಿಗಳು ತಮ್ಮ ತಮ್ಮ ಪ್ರಸಿದ್ಧಪತ್ರಿಕೆಯಲ್ಲಿ ನಮೂದಿಸಿ ಯಿರುವ ಲಿಖ್ಖಾಚಾರಗಳು ಬರಿ ಪೊಜಿ ವೈಳಿದ್ದಾಗಿಯೂ ಜನಗಳಿಗೆ ಆಕಿ ಪುಂಟಾಗಲು ಮಾಯೆತೋರಿಸತಕ್ಕದ್ದಾಗಿಯೂ ಯಿವೆ.

ವೆಂದು ಕಂಪೆನಿಯಲ್ಲಿ ಫೀ ಇಸಂ ವಂದು ರೂಪಾಯಿ ಪ್ರಕಾರ ಕಾಲ್ಸ್ ಕಟ್ಟುವ 10 ಜನ ಷೇರ್ ಹೊಲ್ಡರ್‌ಗಳು ಯಿದ್ದುಈ 10 ಮಂದಿಯಲ್ಲಿ ಪ್ರತಿ ಒಬ್ಬನಿಗೂ ಸ್ವಲ್ಪಕಾಲದಲ್ಲಿಯೆ ಹೆಚ್ಚಾದ ನಫೆ ಕಿಕ್ಕುವದಾದರೆ ಆ ನಫೆಗೆ ತಕ್ಕಷ್ಟು ವರಮಾನ ಕಂಪೆನಿಯವರಿಗೆ ಹ್ಯಾಗೆ ಬರುತ್ತೆಂಬುವದನ್ನ ಕುರಿತು ಯೆಲ್ಲ ಷೇರ್ ಹೊಲ್ಡರ್‌ಗಳೂ ಬಹಳ ಜಾಗರೂಕತೆಯಿಂದ ಯೋಚಿಸತಕ್ಕ್ದ್ದಾಗಿ ಯಿರುತ್ತ್. ಪ್ರಥಮದಲ್ಲಿ ಕೆಲವು ಜನಗಳಿಗೆ ಮಾತ್ರ ಅನ್ಯಾಯವಾಗಿ ಹೆಚ್ಚುದ್ರವ್ಯ ಸಂಪಾದನೆ ಆಗೋಣವೂ ಕಾಲ್ಸ್‌ಗಳು ಕಟ್ಟುವದು ನಿಂತು ಹೋದರೆ ವುಳಿದ ಸುವಿಧಾರು ಜನಗಳಿಗೆ ಬಹಳನಷ್ಟ ಸಂಭವಿಸೋಣವೂ ನಿಸ್ಸಂದೇಹವಾದ ಸಂಗತಿಯಾಗಿ ಯಿರುತ್ತ್. ಯೆಲ್ಲ ಷೇರ್‌ದಾರರಿಂದಲೂ ಜವಾಯಿಸುವ ಭೂರೀ ಹಣವನ್ನ ಕಂಪೆನಿಗೆ ಕೀರಿದ ವುದ್ಯೋಗಸ್ತರು ಮತ್ತು ಅವರಿಗೆ ಆಪ್ತರಾದ ಕೆಲವು ಷೇರದಾರ್‌ರು ಸಹ ಹಂಚಿಕೊಳ್ಳುತ್ತಾ ಬಂದರೆ ಇತರರಿಗೆಲ್ಲ ನಷ್ಟ ವುಂಟಾಗುವದರಲ್ಲಿ ಸಂದೇಹವೇ ಯಿಲ್ಲ.

ಇದರಿಂದ ಆದಿಯಲ್ಲಿ ಷೇರ್‌ದಾರ್‌ರು ಯಾವ ಕೋರಿಕೆ ಮತ್ತು ಕುತೂಹಲದಿಂದ ಕಂಪೆನಿಗೆ ಕೀರಿ ಕಾಲ್ಸ್ ಕಟ್ಟುತ್ತಾರೋ ಅದು ಭಗ್ನವಾಗಿ ಅಬ್ಬೆರಿಗೆ ವೋಸಹೋಗುವರು. ಜನಗಳಿಗೆ ವೃಥಾಭ್ರಮೆಪಡಿಸುತ್ತ್ ಲಿರುವ ಈ ಕಂಪೆನಿಗಳ ಆಡಳತಗಳು ಗವರ್ಮೆಂಟಿನವರ ಜಾಹಿರಾತಿಗೆ ಬಂದು–ಷೇರ್ ದಾರ್‌ರಾಗಬೇಕೆಂದು ವುದ್ದೇಶಿಸುವವರಿಗೆಲ್ಲ ಮೇಲ್ಕಂಡ ಮೇರೆ ವುಂಟಾಗತಕ್ಕ ಅಪಾಯವನ್ನ ಕುರಿತು ಜನ್ನಾಗಿ ಯಿಚ್ಛರಿಸಬೇಕೆಂದು ಅಪ್ಪಣೆ ಕೊಡಿಸಿರುವ ಕಾರಣ ಸಮಸ್ತ ಜನಗಳ ಕ್ಷೇಮಾರ್ಥವಾಗಿ ಈ ಇಸ್ತಿಹಾರ್‌ನಾಮೆ ಕೊಡಲ್ಪಟ್ಟಿರುತ್ತೆ.

ಜನಗಳು ಯಿದನ್ನ ವಳ್ಳೇವಿವೇಕದಿಂದ ತಿಳಿದುಕೊಂಡು ಯಿಂಥಾ ಜಾಜಾಡುನ್ನೋ ಪಾಪೆಯಲ್ಲಿರುವ ಕಂಪೆನಿಗಳಿಗೆ ಕೀರಿ ತಮ್ಮ ಕಷ್ಟದಿಂದ ಸಂಪಾದಿಸುವ ಹಣವನ್ನು ವ್ಯಯಮಾಡತಕ್ಕ್ದ್ದು ಯೆಷ್ಟುಮಾತ್ರವೂ ವಿಹಿತವಲ್ಲವೆಂತ ಯೇನಿಸಬಹುದಾಗಿ ಯಿದೆ.

ಅಬ್ದುಲ್‌ರಹಿಮ್ಮಾ,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 129.

ವೃತಪಟ್ಟ ವೀರೇಗವ್ವಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮಾದಯ್ಯನು, ವೃತಪಟ್ಟ ಸದರೀ ವೀರೇಗವ್ವಡರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾ॥ ಇಲವಾಲದ ಹೋಬಳಿ ಬೆಮ್ಮೇನಹಳ್ಳಿ ಸಳದ ಸದರೀ ಮಾದಯ್ಯನವರ ೨ ಸದರೀ ವಾಸಸ್ಥಗಿ ವೃತಪಟ್ಟ ವೀರೇಗವ್ವಡರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟಿ ಬ್ಯೈ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಾದಯ್ಯನವರ ಅರ್ಜೀಯನ್ನು 1889ನೇ ಇಸವಿ ಜುಲೈ ತಿಂಗಳು ತಾರೀಖು 15ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ವೀರೇಗವ್ವಡರ ಆಸ್ತಿಗೆ ಹಕ್ಕುದಾರರಾದವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಜೂನ್ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜೀ ನಂಬರ್ 135.

ವೃತಪಟ್ಟ ಪದ್ಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಬ್ರಹ್ಮಸೂರಯ್ಯ 2ನೇ ಆನಂತರಾಜು ಮೈನರ್ ಗಾರ್ಡಿಯರ್ ತಾಯಿ ರಾಜಮ್ಮನು ವೃತಪಟ್ಟ ಸದರೀ ಪದ್ಮಯ್ಯನವರಿಗೆಮಕ್ಕಳು ಹಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಬನವನ ಮೊಹಲಾ ಸ್ಥಳದ ಸದರೀ ರಾಜಮ್ಮನವರು ಸದರೀ ವಾಸಸ್ಥರಾಗಿ ವೃತಪಟ್ಟ ಪದ್ಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಜಮ್ಮನವರ ಅರ್ಜಿಯನ್ನು 1889ನೇ ಇಸವಿ ಜುಲೈ ತಿಂಗಳು ತಾರೀಖು 15ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಪದ್ಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1889ನೇ ಇಸವಿ ಜೂನ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜೀ ನಂಬರ್ 137.

ವೃತಪಟ್ಟ ಕುಂಭಕೋಣೆ ವೆಂಕೋಬಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಘವೇಂದ್ರಾಚಾರು, ವೃತಪಟ್ಟ ಸದರೀ ವೆಂಕೋಬಾಚಾರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹೊಳೆನರಸೀಪುರದ ಸ್ಥಳದ ಸದರೀ ರಾಘವೇಂದ್ರಾಚಾರ್ ಸದರೀ ವಾಸಸ್ಥರಾಗಿ ವೃತಪಟ್ಟ ವೆಂಕೋಬಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 2500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಘವೇಂದ್ರಾಚಾರ್ರ ಅರ್ಜೀಯನ್ನು 1889ನೇ ಇಸವಿ ಜುಲೈ ತಿಂಗಳು ತಾರೀಖು 19ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ್ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ವೆಂಕೋಬಾಚಾರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇದೆ.

1889ನೇ ಇಸವಿ ಜೂನ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಏಸ್. ಹೇಮಾಜಿರಾವ್ ಡಿಸ್ಟ್ರಿಕ್ಟ್ ಜಡ್.